ಸಿಸಿ.884/2014

ಪಿ.ಡಬ್ಲ್ಯೂ- 7

**ದಿನಾಂಕ: 04-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಆರೋಪಿ ಪರ ಶ್ರೀ ಎಂ ಕೆ ಟಿ **ವಕೀಲರಿಂದ**

ಬ್ಯಾಂಕಿನಲ್ಲಿದ್ದ ಬಂಗಾರವನ್ನು ಪರಿಶೀಲನೆ ಮಾಡಲು ಉಪಕರಣ ತೆಗೆದುಕೊಂಡು ಹೋಗಿದ್ದೀರಾ ಎಂದರೆ ಸಾಕ್ಷಿ ಬ್ಯಾಂಕಿನಲ್ಲಿ ಬಂಗಾರವನ್ನು ಪರಿಶೀಲನೆ ಮಾಡುವ ಉಪಕರಣಗಳು ಇದ್ದವು ಎಂದು ನುಡಿದಿರುತ್ತಾರೆ. ನೀವು ಬಂಗಾರವನ್ನು ಪರೀಕ್ಷೆ ಮಾಡುವಾಗ ಬ್ಯಾಂಕಿನ ಯಾವ ಅಧಿಕಾರಿಗಳು ಇದ್ದರು ಎಂದರೆ ಸಾಕ್ಷಿಯು ಲಕ್ಷ್ಮೀನಾರಾಯಣ, ಶಶಿಧರಮೂರ್ತಿ, ಜಕಣಾಚಾರಿಯವರು ಹಾಜರಿದ್ದರು ಎಂದು ನುಡಿದಿರುತ್ತಾರೆ. ಇವರುಗಳ ಜೊತೆ ಗ್ರಾಮಸ್ಥರಾದ ಇನ್ನು 6-7 ಜನ ಇದ್ದರು ಎಂದರೆ ಸರಿ. ನೀವು ಎಷ್ಟು ಬಾರಿ ಬಂಗಾರವನ್ನು ಪರೀಕ್ಷೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಒಂದು ಬಾರಿ ಮಾಡಿರುತ್ತೇನೆಂದು ನುಡಿದಿರುತ್ತಾರೆ. ನಾನು ಬಂಗಾರವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ನೀವು ಯಾವುದೇ ಪರೀಕ್ಷೆ ಮಾಡಿರುವುದಿಲ್ಲ, ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**